



ಬರಲು ನನಗೆ ಭಯವೂ ಆಗುತ್ತದೆ, ಹರಿ!'

ದೇವದಾಸ ಬಾ ಅವರ ಮುಖದಲ್ಲಿದ್ದ ವೇದನೆಯನ್ನು ನೋಡುತ್ತಿದ್ದ. ಅವರ ಮಾತನ್ನು ತನ್ನ ಹೃದಯದಲ್ಲಿ ಇಳಿಸಿಕೊಳ್ಳುವಂತೆ ಅವನು ಅವರ ಒಂದೊಂದು ಶಬ್ದವನ್ನು ಸಹ ಗಮನವಿಟ್ಟು ಕೇಳುತ್ತಿದ್ದ.

'...ನೀನು ನಿನ್ನ ಪಿತ್ರಾರ್ಜಿತ ಧರ್ಮವನ್ನು ಯಾಕೆ ಬದಲಾಯಿಸಿದೆಯೋ, ನನಗೆ ತಿಳಿಯಲಿಲ್ಲ.' ಬಾ ಅವರು ಪ್ರತ್ಯಕ್ಷವಾಗಿ ಹರಿಲಾಲನೊಂದಿಗೆ ಮಾತನಾಡುತ್ತಿರುವಂತೆ ತೋರುತ್ತಿತ್ತು, 'ನೀನು ಜನರಿಗೆ ನಿನ್ನನ್ನು ಹಿಂಬಾಲಿಸುವಂತೆ ಸಲಹೆಯನ್ನು ಕೊಡುತ್ತಿದ್ದೀಯ ಎಂದು ಕೇಳಿದೆ. ಹರಿ, ಹೀಗೇಕೆ ಮಾಡುತ್ತಿದ್ದೀಯ? ಧರ್ಮದ ಬಗ್ಗೆ ನಿನಗಿರುವ ತಿಳಿವಳಿಕೆಯಾದರೂ ಏನು? ನೀನು ಧರ್ಮ ಪ್ರಚಾರ ಮಾಡಲು ಯೋಗ್ಯನಲ್ಲ. ನೀನು ಸಾರಾಯಿ ಕುಡಿದು ಭಾಷಣವನ್ನು ಮಾಡುತ್ತೀಯ...ನೀನು ನಿನ್ನನ್ನೇ, ನಿನ್ನ ಆತ್ಮವನ್ನೇ ಹತ್ಯೆ ಮಾಡಿಕೊಳ್ಳುತ್ತಿದ್ದೀಯ... ಸ್ವಲ್ಪ ಶಾಂತ ಮನಸ್ಸಿನಿಂದ ಯೋಚನೆ ಮಾಡು! ನಿನ್ನ ಈ ವ್ಯವಹಾರದಿಂದ ನಿನ್ನ ಮಕ್ಕಳು ಮತ್ತು ನಿನ್ನ ಅಳಿಯ ಏನೇನು ಯೋಚಿಸುತ್ತಿರಬಹುದು...ಅವರ ಪರಿಸ್ಥಿತಿ ಏನಾಗಿರಬಹುದು...?'

ಇಷ್ಟು ಹೇಳಿ ಬಾ ಅವರು ಅಕಸ್ಮಾತ್ ತಮ್ಮ ದುಃಖದ ಮಾತುಗಳನ್ನು ನಿಲ್ಲಿಸಿದರು. ಅವರ ತುಟಿಗಳು ಈಗಲೂ ಕಂಪಿಸುತ್ತಿದ್ದವು. ಕಣ್ಣುಗಳಿಂದ ಕಣ್ಣೀರು ಸುರಿಯುತ್ತಿತ್ತು. ದೇವದಾಸ ಭಯದಿಂದ ಕಂಪಿಸಿದ. ಅವನು ತಾಯಿಯ ಹೆಗಲ ಮೇಲೆ ಕೈಯಿಟ್ಟ. ಬಾ ಅವರು ಆ ಕೈಯನ್ನು ಹಿಡಿದರು. ಎದುರಿಗಿದ್ದ ದೇವದಾಸನ ಮೇಲೆ ಮೊದಲ ಬಾರಿಗೆ ಅವರ ದೃಷ್ಟಿ ಹರಿಯಿತು, 'ದೇವದಾಸ! ನಾನು ನಿನಗೇನಾದರೂ ಹೇಳಿದನೇ?'

'ಅಮ್ಮಾ...ಮನಸ್ಸನ್ನು ಹತ್ತಿಕ್ಕಿಕೋ...ನೀನು ಹೇಳಿದ್ದನ್ನೆಲ್ಲಾ ನಾನು ಕೇಳಿದೆ...ಆದರೆ ನಿನ್ನ ಈ ಮಾತುಗಳು ಹರಿಲಾಲನನ್ನು ತಲುಪಲಾರವು.'

'ದೇವದಾಸ, ನಾನು ಹರಿಲಾಲನಿಗೆ ಏನೇನು ಹೇಳಿದೆ?' ಬಾ ಅವರು ಈಗ ಸಹಜಾವಸ್ಥೆಗೆ ಬಂದು ಹೇಳಿದರು, 'ಹರಿಲಾಲನಿಗೆ ಹೇಳಿದ ಮಾತುಗಳು ನಿನಗೆ ಸರಿಯೆಂದು ಕಂಡು ಬಂದರೆ, ಅದನ್ನೆಲ್ಲಾ ನೀನು ಹರಿಲಾಲನಿಗೆ ತಿಳಿಸು. ವೃದ್ಧ ಮಾತೆಯ ಈ ಸೇವೆ...'

'ಅಮ್ಮಾ...' ದೇವದಾಸ ಬಾ ಅವರ ಎರಡೂ ಕೈಗಳನ್ನು ಹಿಡಿದು ಹೇಳಿದ, 'ನಿನ್ನ ಮಾತನ್ನು ಹೇಗಾದರೂ ಮಾಡಿ ನಾನು ಹರಿಲಾಲನಿಗೆ ತಲುಪಿಸುತ್ತೇನೆ...ನೀನು ಶಾಂತಳಾಗು...ನಿನ್ನ ಮೇಲೆ ನಿನಗೆ ಹಿಡಿತವಿರಲಿ...'

'ದೇವದಾಸ...ಹರಿಲಾಲನನ್ನು ಪುಸಲಾಯಿಸಿ ಅವನಿಂದ ಇದನ್ನೆಲ್ಲಾ ಮಾಡಿಸುತ್ತಿದ್ದಾರಲ್ಲ, ಅವರಿಗೂ ನನ್ನ ಮಾತನ್ನು ತಲುಪಿಸು...'

'ಅಮ್ಮಾ, ಏನು ಹೇಳಲಿ?'

'ನಿಮ್ಮ ಈ ವ್ಯವಹಾರ ನನಗೆ ಅರ್ಥವಾಗುತ್ತಿಲ್ಲ, ಡಾಕ್ಟರ್ ಅನ್ಸಾರಿಯವರು ಇಂದು ಇದ್ದಿದ್ದರೆ ಅವರು ನಿಮಗೆ ಸೂಕ್ತವಾದ ಸಲಹೆಯನ್ನು ಕೊಡುತ್ತಿದ್ದರು...ನನ್ನ ಮಗನನ್ನು ಸುಧಾರಣೆ ಮಾಡುವುದಕ್ಕೆ ಬದಲಾಗಿ ಅವನನ್ನು ಹಾಳು ಮಾಡುತ್ತಿದ್ದೀರ...ನೀವು ಅವನನ್ನು 'ಮೌಲ್ವಿ' ಎನ್ನುತ್ತೀರ...? ಇದು ಸರಿಯೇ? ನಿಮ್ಮ ಧರ್ಮ ಕುಡುಕನಿಗೆ, ಸಾರಾಯಿ ಕುಡಿಯುವವನಿಗೆ ಮೌಲ್ವಿ ಎನ್ನಲು ಅವಕಾಶವನ್ನು ಕೊಡುವುದೇ? ಇಂಥ ವ್ಯವಹಾರದಿಂದ ನಿಮಗೆಂಥ ಸಂತೋಷ ಸಿಗುವುದು ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಜಗತ್ತಿನ ಎದುರು ನಮ್ಮನ್ನು ಗೇಲಿ ಮಾಡಬೇಕೆಂಬ ಇಚ್ಛೆ ಇದ್ದರೆ, ನಾನು ನಿಮಗೇನೂ ಹೇಳಲು ಸಾಧ್ಯವಿಲ್ಲ. ಪೆಟ್ಟು ತಿಂದ ತಾಯಿಯೊಬ್ಬಳ ದೌರ್ಬಲ್ಯದ ಧ್ವನಿ ನಿಮ್ಮಲ್ಲಿ ಒಬ್ಬನ ಅಂತಃಕರಣವನ್ನಾದರೂ ತಟ್ಟುತ್ತದೆ, ನೀವು ಮಾಡುತ್ತಿರುವುದು ಖುದಾನ ದೃಷ್ಟಿಯಲ್ಲಿ ಉಚಿತವೆಂದು ಹೇಳಲಾಗದು.' ಬಾ ಅವರ ಗಂಟಲು ಒತ್ತಿ ಬಂತು. ಅವರಿಂದ ಮುಂದಕ್ಕೆ ಮಾತನಾಡಲು ಸಾಧ್ಯವಾಗಲಿಲ್ಲ. ದೇವದಾಸ ಬಾ ಅವರ ಬೆನ್ನಿನ ಮೇಲೆ ಕೈಯನ್ನಿಟ್ಟ, ಬಾ ಅವರು ದೇವದಾಸನ ತಲೆಯನ್ನು ನೇವರಿಸಿದರು.

ಸ್ವಲ್ಪ ಹೊತ್ತಿಗೆ ಬಾ ಅವರು ಸಹಜಾವಸ್ಥೆಗೆ ಬಂದರು. ಪೂಜೆಯ ನಂತರ ನಿತ್ಯದ ಕೆಲಸ ಕಾರ್ಯಗಳಲ್ಲಿ ತೊಡಗಿದರು. ಆಗ ದೇವದಾಸ ಬಾ ಅವರು ಹೇಳಿದ ಒಂದೊಂದು ಶಬ್ದವನ್ನೂ ಸಹ ಹಾಳೆಯಲ್ಲಿ ಬರೆದ, ಆ ಬರಹ ಕೇವಲ ಶಬ್ದಗಳ ವರ್ಣನೆ ಮಾತ್ರವಾಗಿರಲಿಲ್ಲ, ಪ್ರತಿಯಾಗಿ ತಾಯಿಯೊಬ್ಬಳ ಪ್ರೀತಿಯ, ಅವಳ ವಾತ್ಸಲ್ಯದ ಸಾರವಾಗಿತ್ತು. ಆ ಪ್ರೀತಿ ಮತ್ತು ವಾತ್ಸಲ್ಯವನ್ನು ಹರಿಲಾಲನಿಗೆ ತಲುಪಿಸುವ ಮಾರ್ಗ ದೇವದಾಸನಿಗೆ ಹೊಳೆಯುತ್ತಿರಲಿಲ್ಲ. ಅವನು ಸಾಕಷ್ಟು ಹೊತ್ತು ವಿಚಾರಗಳಲ್ಲಿ ಮುಳುಗಿದ್ದ ನಂತರ ಒಂದು ತೀರ್ಮಾನಕ್ಕೆ ಬಂದ. ಹರಿಲಾಲನಿಗೆ ಅವನದೇ ಆದ ವಿಳಾಸವಿರಲಿಲ್ಲ. ಹೀಗಾಗಿ ಆ ಪತ್ರವನ್ನು 'ಹರಿಲಾಲನ ಹೆಸರಿಗೆ ಬಾ ಅವರ ಪತ್ರ' ಶೀರ್ಷಿಕೆಯಲ್ಲಿ ದೇಶದ ಪತ್ರಿಕೆಗಳಲ್ಲಿ ಪ್ರಕಟಿಸಲು ತೀರ್ಮಾನಿಸಿದ. ಈ ತೀರ್ಮಾನದಿಂದ ಸಂಬಂಧಪಟ್ಟ ಎಲ್ಲರಿಗೂ ಬಾ ಅವರ ವ್ಯಥೆಯನ್ನು ತಲುಪಿಸಲು ಸಾಧ್ಯವಿತ್ತು. ಪತ್ರದ ಒಕ್ಕಣಿಕೆಗೆ 'ಪುತ್ರನ ಹೆಸರಿಗೆ ತಾಯಿಯೊಬ್ಬಳ ಬಹಿರಂಗ ಪತ್ರ!' ಎಂದು ತಲೆಬರಹವನ್ನಿಟ್ಟ. ನಂತರ ಅದರ ಅಗತ್ಯವಿದ್ದಷ್ಟು ಪ್ರತಿಗಳನ್ನು ಮಾಡಿಸಿ, ದೇಶದ ಪ್ರಸಿದ್ಧ ಪತ್ರಿಕೆಗಳಿಗೆ ಪ್ರಕಟಿಸಲು ಕಳುಹಿಸಿದ.

***

ಈ ಪತ್ರ ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ ಹರಿಲಾಲ ಕಾನ್ಪುರದಲ್ಲಿದ್ದ. ಹರಿಲಾಲ ಪತ್ರವನ್ನು ಓದಿದ. ಪತ್ರದ ಲೇಖಕನ ಬಗ್ಗೆ ಅವನಿಗೆ ಸಂದೇಹವುಂಟಾಯಿತು. ಬಾ ಅವರು ಇಷ್ಟು ವ್ಯವಸ್ಥಿತವಾಗಿ, ಕ್ರಮಬದ್ಧವಾಗಿ ಬರೆಯಲು ಹೇಗೆ ಸಾಧ್ಯವಿತ್ತು? ಅಥವಾ ಬಾಪು ಅವರು ಸ್ವತಃ ಬಾ ಅವರ ಹೆಸರಿನಲ್ಲಿ ಇದನ್ನೆಲ್ಲಾ ಬರೆಸಿದರೇ? ತನ್ನ ಮನಸ್ಸನ್ನು ಕರಗಿಸಲು ಬೇರೆಯವರು ಬಾ ಅವರ ಹೆಸರನ್ನು ಉಪಯೋಗಿಸಿಕೊಂಡಿದ್ದಾರೆ. ತನ್ನಲ್ಲಿ ಕರುಣೆಯನ್ನು ಮೂಡಿಸಲು ಬೇರೆಯವರೊಬ್ಬರು ಬಾ ಅವರ ಹೆಸರನ್ನು ಬಳಸಿಕೊಂಡಿದ್ದಾರೆಯೇ?

ಅಂದು ಹರಿಲಾಲ ಒಂದು ಸಾರ್ವಜನಿಕ ಸಭೆಯಲ್ಲಿ ಆ ಪತ್ರವನ್ನು ಉಲ್ಲೇಖಿಸಿ ಅದಕ್ಕೆ ಉತ್ತರವನ್ನು ಕೊಡುತ್ತಾ ಹೇಳಿದ

'...ನಾನು ಅಬ್ದುಲ್ಲಾ ಆಗಿದ್ದೇನೆ, ಹರಿಲಾಲ ಅಲ್ಲ. ಈ ಪತ್ರವನ್ನು ಹರಿಲಾಲನ ಹೆಸರಿಗೆ ಬರೆಯಲಾಗಿದೆ, ಹೀಗಾಗಿ ಈ ಪತ್ರವನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನನ್ನ ತಾಯಿ ಅಶಿಕ್ಷಿತೆ. ಅವಳು ಹೀಗೆ ಪತ್ರ ಬರೆಯುತ್ತಾಳೆಎಂಬುದನ್ನು ನಾನು ನಂಬುವುದಿಲ್ಲ. ಈ ಪತ್ರ ಬೇರೆಯವರು ಬರೆದಿದ್ದಾರೆಂದು ನನಗೆ ಅನ್ನಿಸುತ್ತದೆ. ನಾನು ಮತಾಂತರಗೊಳ್ಳುವುದಕ್ಕೂ ಮೊದಲು ಕೆಟ್ಟ ಸ್ನೇಹಿತರ ಸಹವಾಸದಲ್ಲಿದ್ದೆ. ಈಗ ನಾನೇನನ್ನೂ ಕಲಿಯಬೇಕಿಲ್ಲ. ಇಸ್ಲಾಮ್ ಧರ್ಮದ ಒಬ್ಬ ಕಾರ್ಯಕರ್ತನಾಗಿ ಸಾಯಬೇಕೆಂಬ ಒಂದೇ ಒಂದು ಇಚ್ಛೆ ಈಗ ನನಗಿದೆ... ನನ್ನ ತಾಯಿ ಕಸ್ತೂರಬಾಯಿ ನನಗೆ ಮದ್ಯವನ್ನು ತ್ಯಜಿಸುವಂತೆ ಹೇಳುತ್ತಾರೆ... ಪ್ರಾರ್ಥಿಸುತ್ತಾರೆ. ಅವರಿಗೆ ನನ್ನದೊಂದು ಉತ್ತರ ಇದೆ. ನಾನು ಮದ್ಯವನ್ನು ಬಿಡುತ್ತೇನೆ, ಆದರೆ ಯಾವಾಗ? ಯಾವಾಗೆಂದರೆ, ನನ್ನ ತಂದೆ ಮತ್ತು ಬಾ ಇಬ್ಬರೂ ಇಸ್ಲಾಮ್ ಧರ್ಮವನ್ನು ಒಪ್ಪಿಕೊಂಡಾಗ.'

## ಮೂವತ್ತೈದು

ಸಾರ್ವಜನಿಕ ಸಭೆಯಲ್ಲಿ ತಿಳಿವಳಿಕೆಯಿಲ್ಲದ ಗುಂಪುಗಳ ಚಪ್ಪಾಳೆ ಧ್ವನಿಗಳು ಮತ್ತು ಜಯ ಘೋಷಣೆಗಳ ನಡುವೆ ಭಾಷಣ ಮಾಡುವುದು ಒಂದು ಸಂಗತಿಯಾದರೆ, ರಾತ್ರಿಯಾದಾಗ ಹಾಸಿಗೆಯ ಮೇಲೆ ಬಿದ್ದು ಭಾವಣೆಯನ್ನು ನೋಡುವುದು ಇನ್ನೊಂದು ಸಂಗತಿಯಾಗುತ್ತಿತ್ತು. ಇಂದು ಸಹ ಹರಿಲಾಲ ನಿತ್ಯದಂತೆ ಕುಡಿದಿದ್ದ, ಆದರೆ ಇಂದು ಅವನಿಂದ ನಿದ್ರೆ ದೂರಕ್ಕೆ ಓಡುತ್ತಿತ್ತು. ತಲೆ ಭಾರವಾಗಿತ್ತು. ನಿದ್ರೆ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ. ಬಾ ಅವರ ಆಕೃತಿ ಒಂದೇ ಸಮನೆ ಅವನೆದುರು ಮೂಡುತ್ತಿತ್ತು. ಪತ್ರಿಕೆಗಳಲ್ಲಿ ಬಾ ಅವರ ಹೆಸರಿನಲ್ಲಿ ಪ್ರಕಟಗೊಂಡಿದ್ದ ಪತ್ರದ ಭಾಷೆ ಬಾ ಅವರದ್ದಲ್ಲ ಎಂಬ ವಿಶ್ವಾಸ ಹರಿಲಾಲನಿಗಿತ್ತು; ಆದರೆ ಆ ಪತ್ರದಲ್ಲಿದ್ದ ಭಾವನೆ ಬಾ ಅವರದ್ದೇ, ಅದು ಬೇರೆಯವರ ಭಾವನೆಯಾಗಲು ಸಾಧ್ಯವಿಲ್ಲ ಎಂಬುದನ್ನೂ ಮರೆಯಲು ಹರಿಲಾಲನಿಂದ ಸಾಧ್ಯವಾಗುತ್ತಿರಲಿಲ್ಲ. ಉನ್ಮಾದದ ಸ್ಥಿತಿಯಲ್ಲಿ ಹರಿಲಾಲ ಸಾರ್ವಜನಿಕ ಸಭೆಯಲ್ಲಿ ಬಾ ಅವರ ಬಗ್ಗೆ ಅಲ್ಲಸಲ್ಲದ ವಿಷಯಗಳನ್ನು ಹೇಳಿದ್ದ, ಆದರೆ ಈಗ ರಾತ್ರಿಯ ನಿಶ್ಶಬ್ದತೆಯಲ್ಲಿ ಹರಿಲಾಲನಿಗೆ, ಬಾ ಅವರು ತನ್ನೆದುರು ನಿಂತು ತಮ್ಮ ಹೃದಯದ ಮಾತುಗಳನ್ನು ಹೇಳುತ್ತಿದ್ದಾರೆ ಎಂದು ಅನ್ನಿಸುತ್ತಿತ್ತು. ಬಾ ಅವರ ಕಂಪಿಸುವ, ಬಡಬಡಿಸುವ ತುಟಿಗಳು, ನೋವನ್ನು ಒಳಗೇ ಹತ್ತಿಕ್ಕಿಕೊಳ್ಳುತ್ತಿದ್ದ ಅವರ ಮುಖ, ಕಣ್ಣೀರನ್ನು ಬಲಾತ್ಕಾರವಾಗಿ ತಡೆಹಿಡಿಯುತ್ತಿದ್ದ ಕಣ್ಣುಗಳು ಎಲ್ಲವೂ ಇಂದು ಹರಿಲಾಲನ ಎದುರಿನಿಂದ ಸರಿಯುತ್ತಿರಲಿಲ್ಲ.

'...ಹರಿ!...ಬೇಟಾ ಹರಿ! ನಮ್ಮ ಈ ಜೀವನದ ಸಂಜೆಯಲ್ಲಿ ನೀನು ನಮಗೆ ಇಂಥ ದುಃಖವನ್ನೇಕೆ ಕೊಡುತ್ತಿದ್ದೀಯ? ಹರಿ, ನಾನು ಅಬಲೆ, ವೃದ್ಧೆ. ಇದನ್ನೆಲ್ಲಾ ಸಹಿಸಲಾರೆ. ನಿನ್ನನ್ನು ನೋಡಲು